ಸಾಕ್ಷಿಯನ್ನು ದಿಃ **11.03.2024** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

<u>ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ ವಿ.ಜಿ.ಎಂ. ವಕೀಲರಿಂದಃ-</u>

ನಮ್ಮ ತಂದೆ 2013 ನೇ ಸಾಲಿನಲ್ಲಿ ಮರಣ ಹೊಂದಿದ್ದಾರೆ. ನಮ್ಮ ತಂದೆಯ ಜೀವಂತ ಕಾಲದಲ್ಲಿ ನಾವು ಅಣ್ಣತಮ್ಮಂದಿರೆಲ್ಲ ಒಟ್ಟಿಗೆ ಇದ್ದೆವು ಎಂದರೆ ಒಟ್ಟಿಗೆ ಇದ್ದೆವು ಆದರೆ ವ್ಯವಹಾರ ಬೇರೆ ಬೇರೆ ಮಾಡುತ್ತಿದ್ದೆವು.ಈ ದಾವಾದಲ್ಲಿ ಎಲ್ಲಾ ಆಸ್ತಿಗಳನ್ನು ಸೇರಿಸಿದ್ದೀರಾ ಎಂದರೆ ನಮ್ಮ ತಂದೆಯ ಆಸ್ತಿಗಳನ್ನು ಮಾತ್ರ ಸೇರಿಸಿದ್ದೇವೆ. ನಮ್ಮ ತಂದೆ ಸತ್ತ ನಂತರ ನಾವು ನಮ್ಮ ಕುಟುಂಬದ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಿಲ್ಲ. ನಮ್ಮ ತಂದೆಯ ಮರಣಾ ನಂತರ ನಮ್ಮ ತಾಯಿ, ನಾನು ಮತ್ತು ನನನ ಇಬ್ಬರು ಸಹೋದರರು ನಮ್ಮ ಕುಲ ಬಾಂಧವರು ಮತ್ತು ಗ್ರಾಮದ ಹಿತೈಷಿಗಳ ಸಮಕ್ಷಮ ನಾವು ಪಂಚಾಯತಿ ಪಾಲುಪಾರಿಕತ್ ಮಾಡಿಕೊಂಡೆವು ಎಂದರೆ ಮಾಡಿಕೊಂಡೆವು ಆದರೆ ಅದು ಸಿಂಧೂವಾಗಲಿಲ್ಲ. ಸದರಿ ಪಾಲುಪಾರಿಕತ್‌ನ್ನು ರೂ.500/- ಮುಖ ಬೆಲೆಯ ಛಾಪಾಕಾಗದದಲ್ಲಿ ಮಾಡಿಕೊಂಡಿದ್ದೆವು ಎಂದರೆ ಸರಿಯಲ್ಲ. ಅದು ರೂ.50/- ಮುಖ ಬೆಲೆಯ ಪೇಪರ್ ಆಗಿದ್ದೀರಬಹುದು. ಸದರಿ ಪಾಲುಪಾರಿಕತ್‌ನ್ನು ಸಿದ್ಧನಾಯಕ ಎನ್ನುವವರು ಬರೆದಿದ್ದಾರೆ. ಸದರಿ ಪಾಲುಪಾರಿಕತ್ ಮಾಡಿಕೊಳ್ಳುವಾಗ ನಾವು ಮೂರು ಜನ ಅಣ್ಣತಮ್ಮಂದಿರು, ನಮ್ಮ ತಾಯಿ ನಮ್ಮ ಸೋದರಮಾವ ಮಹದೇವಪ್ಪ, ಹಂದರಹಳ್ಳಿ ಸೋಮಶೇಖರ ಇದ್ದರಾ ಎಂದರೆ ಹೌದು ಇದ್ದರು, ಇನ್ನಾರು ಇದ್ದರು ಎಂದರೆ ನನಗೆ ನೆನಪಿಲ್ಲ, ನನ್ನ ಸೋದರಮಾವ ಮಹದೇವಪ್ಪ ಹಾಲಿ ಮರಣ ಹೊಂದಿದ್ದಾರೆ. ದಾಖಲೆ ಬರೆಯಲು ಸ್ಟ್ಯಾಂಪ ಪೇಪರನ್ನು ಯಾರು ತಂದಿದ್ದರು ಎಂದು ನನಗೆ ನೆನಪಿಲ್ಲ.

ಅಣ್ಣತಮ್ಮಂದಿರಾದ ನಾವು ಮೂರು ಜನ ಸದರಿ ಪಾಲುಪಾರಿಕತ್‌ನಂತೆ ನಡೆದುಕೊಳ್ಳಲಿಲ್ಲ ಆದ್ದರಿಂದ ಅದು ಸಿಂಧೂವಾಗಲಿಲ್ಲ ಎಂದು ನಾನು ಹೇಳುತ್ತಿದ್ದೇನೆ. ಈ ಪಾಲುಪಾರಿಕತ್ ನಲ್ಲಿ ಬಿ.ಆರ್.ಕಾವಲ್ ಆಸ್ತಿ, ಹನಗೋಡು ಗ್ರಾಮದ ಕೃಷಿ ಭೂಮಿ, ಮಳಿಗೆಗಳು, ಮನೆಗಳು, ಬ್ಯಾರನ್ ಲೈಸನ್ಸಗಳು, ಟಾರ್ಯಕ್ಟರ, ಅದಕ್ಕೆ ಸಂಬಂಧಪಟ್ಟ ಸಾಲ ಎಲ್ಲವನ್ನು ತೋರಿಸಿ ಯಾರ್ಯಾರಿಗೆ ಏನೇನು ಸಂಬಂಧಪಟ್ಟಿದೆ ಎಂದೂ ಕೂಡ ತೋರಿಸಲಾಗಿತ್ತು ಎಂದರೆ ಸರಿ.

ಸದರಿ ಪಾಲುಪಾರಿಕತ್ ನಂತೆ ಯಾರ್ಯಾರಿಗೆ ಯಾವ ಯಾವ ಭಾಗ ಕಾಣಿಸಲಾಗಿತ್ತೋ ಆಯಾ ಭಾಗಗಳಲ್ಲಿ ಅವರವರು ಅಲಾಯಿದ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ನಮ್ಮ ತಂದೆಯ ಜೀವಂತ ಕಾಲದಲ್ಲಿ ಅವರ ಹೆಸರಿಗೆ ಇದ್ದಂತಹ ಬ್ಯಾರನ್ ಲೈಸನ್ಸ ಅವರ ಮರಣಾ ನಂತರ ನಮ್ಮ ತಾಯಿ ಹೆಸರಿಗೆ ವರ್ಗಾವಣೆಯಾಯಿತು ಎಂದರೆ ಸರಿ. ಸದರಿ ಲೈಸನ್ಸ ಬಗ್ಗೆ ನಮ್ಮ ತಾಯಿಯಿಂದ ಜಿಪಿಎ ಪಡೆದುಕೊಂಡು ಬ್ಯಾಂಕನಿಂದ ಸಾಲವನ್ನು ಪಡೆದುಕೊಂಡೆ ಎಂದರೆ ಸಾಕ್ಷಿ ಬೆಳೆ ಸಾಲವನ್ನು ನಮ್ಮ ಜಮೀನಿನ ಮೇಲೆ ಪಡೆದುಕೊಂಡು ಅದಕ್ಕೆ ಆಧಾರವಾಗಿ ನಮ್ಮ ತಾಯಿ ಲೈಸನ್ಸ ಕೊಟ್ಟಿದ್ದರು ನಾನು ಜಿಪಿಎ ಪಡೆದುಕೊಂಡಿರಲಿಲ್ಲ ಎನ್ನುತ್ತಾರೆ.

ಅದೇ ರೀತಿ ಇನ್ನೆರಡು ಲೈಸನ್ಸಗಳು 3 ನೇ ಪ್ರತಿವಾದಿ ಈಶ್ವರರವರ ಹೆಸರಿನಲ್ಲಿ ಇವೆ ಎಂದರೆ, ಒಂದು ಲೈಸನ್ಸ ಇದೆ. ಸದರಿ ಲೈಸನ್ಸ 16x24 ಕ್ಕೆ ಇದೆ ಎಂದರೆ ಸರಿ. ಬಿ.ಆರ್.ಕಾವಲ್ ಗ್ರಾಮದಲ್ಲಿ ಒಟ್ಟು ಕುಟುಂಬಕ್ಕೆ ಸೇರಿದ 8 ಎಕರೆ ಜಮೀನು ಇದೆ ಎಂದರೆ ಅದು ಒಟ್ಟು ಕುಟುಂಬದ ಸ್ವತ್ತಲ್ಲ, ಸರ್ವೆ ನಂಬರ 35 ರ ಜಮೀನು 3 ನೇ ಪ್ರತಿವಾದಿ ಈಶ್ವರಪ್ಪನವರಿಗೆ ಮಂಜೂರಾಗಿದೆ, ಸರ್ವೆ ನಂಬರ 36 ರ ಜಮೀನು ವಾದಿಯಾದ ನನಗೆ ಮಂಜೂರಾಗಿದೆ. ಈ ರೀತಿ ತಲಾ ನಾಲ್ಕು ಎಕರೆಯಂತೆ ನಮ್ಮಿಬ್ಬರಿಗೆ ಮಂಜೂರಾಗಿರುವ ಜಮೀನು ಆಗಿವೆ. ಸದರಿ ಜಮೀನುಗಳು 1977 ರಲ್ಲಿ ಮಂಜೂರಾಗಿವೆ. ನನಗೆ ಈಗ ವಯಸ್ಸು 62 ವರ್ಷಗಳಾಗಿವೆ. ಅದು ಮಂಜೂರಾದಾಗ ನಿಮಗೆ ಸುಮಾರು 12 ವರ್ಷ ವಯಸ್ಸಾಗಿತ್ತಾ ಎಂದರೆ ನನಗೆ ಗೊತ್ತಿಲ್ಲ. ನಾವು ಸದರಿ ಜಮೀನನ್ನು ಕಾಡು ಕಡಿದು ಅಭಿವೃದ್ಧಿ ಮಾಡಿ ಮಂಜೂರು ಮಾಡಿಸಿಕೊಂಡಿದ್ದೇವು ಆಗ ನನಗೆ ಎಷ್ಟು ವರ್ಷ ವಯಸ್ಸಾಗಿತ್ತು ಎಂದು ನನಗೆ ನೆನಪಿಲ್ಲ. ನಾವು ಅಂದರೆ ನಾನು ಮತ್ತು ಕೂಲಿ ಆಳುಗಳು ಸೇರಿ ಮಾಡಿದ್ದೇವು. ಅದೇ ರೀತಿ 3 ನೇ ಪ್ರತಿವಾದಿ ಈಶ್ವರಪ್ಪ ಕೂಡ ಪ್ರತ್ರೇಕವಾಗಿ ಕೂಲಿ ಆಳುಗಳನ್ನು ಕರೆದುಕೊಂಡು ಅಭಿವೃದ್ಧಿ ಮಾಡಿದ್ದರು. ಸದರಿ ಜಮೀನುಗಳನ್ನು 1976 ರ ಕ್ಕಿಂತ ಪೂರ್ವದಲ್ಲಿ ನಾವು ಕಾಡು ಕಡಿದು ಅಭಿವೃದ್ಧಿ ಮಾಡಿದ್ದೇವಾ ಎಂದರೆ ಹೌದು.

ನಾನು ಕೂಲಿ ಕೆಲಸಕ್ಕೆ ಹೋಗಿ ಸಂಪಾದನೆ ಮಾಡಿ ಸದರಿ ಜಮೀನುಗಳನ್ನು ಅಭಿವೃದ್ಧಿ ಮಾಡಿದ್ದೆ. ನನಗೆ ಕೂಲಿ ಎಷ್ಟು ಸಿಗುತ್ತಿತ್ತು ಎಂದು ನನಗೆ ಈಗ ನೆನಪಿಲ್ಲ. ನಾನು ಪಿಯುಸಿ

ವ್ಯಾಸಂಗ ಮಾಡಿದ್ದೇನೆ ಎಂದು ಹೇಳಿದ್ದು, ಆಗ ನನ್ನ ವಯಸ್ಸು ಎಷ್ಟಾಗಿತ್ತು ಎಂದು ಹೇಳಲು ನನಗೆ ಬರುವುದಿಲ್ಲ, ವ್ಯಾಸಾಂಗ ಮಾಡಿಕೊಂಡು ಕೂಲಿ ಕೆಲಸ ಮಾಡುತ್ತಿದ್ದೆ. ಬಿ.ಆರ್. ಕಾವಲನ ಮೇಲ್ಕಂಡ ಎರಡೂ ಐಟಂ ಸ್ವತ್ತುಗಳನ್ನು ಮೇಲೆ ಹೇಳಿದಂತ 2015ರ ಪಾಲುಪಾರಿ ಕತ್‌ನಲ್ಲಿ 3ನೇ ಪ್ರತಿವಾದಿ ಭಾಗಕ್ಕೆ ಎಂದು ಕಾಣಿಸಲಾಗಿದೆ ಎಂದರೆ ಸರಿ. ಅದೇ ರೀತಿ 3ನೇ ಪ್ರತಿವಾದಿ ಹೆಸರಿನಲ್ಲಿದ್ದಂತಹ 16x24ರ ಲೈಸನ್ಸ ಪೈಕಿ 13x13ರ ಲೈಸನ್ಸ ಸೋಮಪ್ಪನಾದ ನನ್ನ ಪಾಲಿಗೆ ಬರಬೇಕು ಎಂದು ಬರೆಸಲಾಗಿತ್ತು ಎಂದರೆ ನಾನು ಬರೆಸಿಲ್ಲ ನನ್ನ ತಾಯಿ ಅಥವಾ ನನ್ನ ಸಹೋದರ ಬರೆಸಿರಬೇಕು. ಸದರಿ ಪಾಲುಪಾರಿಕತ್‌ಗೆ ನಾನೂ ಕೂಡ ಸಹಿ ಮಾಡಿರುತ್ತೇನೆ ಎಂದರೆ ಸರಿ. ಈ ಪಾಲುಪಾರಿಕತ್ ಅಡಿ ನಮ್ಮ ತಾಯಿ ಭಾಗಕ್ಕೆ ಸರ್ವೇ ನಂ.234ರಲ್ಲಿ 3 ಎಕರೆ 27 ಗುಂಟೆ ಜಮೀನನ್ನು ತೋರಿಸಲಾಗಿತ್ತು ಎಂದರೆ ಸರಿಯಲ್ಲ, ಸದರಿ ಸ್ವತ್ತನ್ನು ನನ್ನ ಪಾಲಿಗೆ ಎಂದು ತೋರಿಸಲಾಗಿತ್ತು. ಈ ಸರ್ವೇ ನಂ. 234 ರ ಜಮೀನನ್ನು ನಮ್ಮ ತಾಯಿ ಹೆಸರಿನಲ್ಲಿ ಕೊಂಡುಕೊಂಳ್ಳಲಾಗಿತ್ತು ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಜೈಬುನ್ನಿಸಾ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.